## **ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:–** ಪದವಿ ಪೂರ್ವ ಶಿಕ್ಷಣ ಇಲಾಖೆಯಲ್ಲಿ ಪ್ರಾಂಶುಪಾಲರು / ಉಪನ್ಯಾಸಕರಾಗಿ ನೇಮಕಗೊಂಡು ಇತರೆ ಇಲಾಖೆಗಳಲ್ಲಿ / ಕಛೇರಿಗಳಲ್ಲಿ ನಿಯೋಜನೆ ಮೇಲೆ ಕಾರ್ಯ ನಿರ್ವಹಿಸುತ್ತಿರುವವರನ್ನು ಸದರಿ ಇಲಾಖೆಯಿಂದ ಹಿಂದಕ್ಕೆ ಪಡೆದು ಮಾತೃ ಇಲಾಖೆಗೆ ಹಿಂದಿರುಗಿಸುವ ಬಗ್ಗೆ.

**ಓದಲಾಗಿದೆ:–**
1. ಆಯುಕ್ತರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು, ಇವರ ಪತ್ರ ಸಂಖ್ಯೆ:ಪಪೂಶಿಇ/ಸಿಬ್ಬಂದಿ–02/ಉ.ನಿಯೋ2007–08, ದಿನಾಂಕ:31/05/2007.
2. ಸರ್ಕಾರದ ಸುತ್ತೋಲೆ ಸಂಖ್ಯೆ:ಇಡಿ 119 ಡಿಜಿಎಂ 2005, ದಿನಾಂಕ:16/08/2005.

**ಪ್ರಸ್ತಾವನೆ:–**

ಮೇಲೆ (1) ರಲ್ಲಿ ಓದಲಾದ ದಿನಾಂಕ:31/05/2007 ರ ಪತ್ರದಲ್ಲಿ ಆಯುಕ್ತರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು, ಪದವಿ ಪೂರ್ವ ಶಿಕ್ಷಣ ಇಲಾಖೆಯಲ್ಲಿ ಪ್ರಾಂಶುಪಾಲರು / ಉಪನ್ಯಾಸಕರಾಗಿ ನೇಮಕಗೊಂಡು ಇತರೆ ಇಲಾಖೆಗಳಲ್ಲಿ / ಕಛೇರಿಗಳಲ್ಲಿ ನಿಯೋಜನೆ ಮೇಲೆ ಕಾರ್ಯ ನಿರ್ವಹಿಸುತ್ತಿದ್ದು, ಪದವಿ ಪೂರ್ವ ಶಿಕ್ಷಣ ಇಲಾಖೆಯಲ್ಲಿ ಹಲವಾರು ಉಪನ್ಯಾಸಕರುಗಳ ಹುದ್ದೆಗಳು ಖಾಲಿ ಇದ್ದು, ಇಲಾಖೆಯಲ್ಲಿ ಅಗತ್ಯಕ್ಕಿಂತ ಹೆಚ್ಚು ಉಪನ್ಯಾಸಕರು ಇರುವುದಿಲ್ಲವೆಂದು, ಉಪನ್ಯಾಸಕರನ್ನು ನಿಯೋಜನೆ ಮೇಲೆ ಬೇರೊಂದು ಇಲಾಖೆಗೆ ಹೋದರೆ ಶೈಕ್ಷಣಿಕ ಚಟುವಟಿಕೆಗಳು ಕುಂಟಿತವಾಗುತ್ತದೆ ಎಂದು, ಉಪನ್ಯಾಸಕರಾಗಿ ಸರ್ಕಾರಿ ಸೇವೆಗೆ ಸೇರಿದವರು ಬೋಧನಾ ಕಾರ್ಯ ಹಾಗೂ ಶೈಕ್ಷಣಿಕ ಚಟುವಟಿಕೆಗಳಲ್ಲಿ ಕಾರ್ಯ ನಿರ್ವಹಿಸಬೇಕೇ ವಿನಃ ಇವರನ್ನು ಇಲಾಖೆಯ ಅಥವಾ ಅನ್ಯ ಇಲಾಖೆಯ ಆಡಳಿತ ಹುದ್ದೆಗಳಿಗೆ ನಿಯೋಜಿಸುವುದು ಅವರ ವೈಯಕ್ತಿಕ ಅನುಕೂಲಗಳಿಗಾಗಿಯೇ ವಿನಃ ಇಲಾಖೆಯ ಅಭಿವೃದ್ಧಿಗೆ ಪೂರಕವಾಗಿರುವುದಿಲ್ಲವೆಂದು ಉಪನ್ಯಾಸಕರನ್ನು ಯಾವ ಉದ್ದೇಶಕ್ಕಾಗಿ ನೇಮಕ ಮಾಡಲಾಗಿದೆಯೋ ಅದೇಶ ಉದ್ದೇಶಕ್ಕೆ ಅವರ ಸೇವೆಯನ್ನು ಬಳಸಿಕೊಳ್ಳಲು ಸೂಕ್ತವಾಗಿದ್ದು, ನಿಯೋಜನೆಯಲ್ಲಿರುವ ಹುದ್ದೆಗಳು Encadre ಹುದ್ದೆಗಳಾಗಿರುವುದಿಲ್ಲವೆಂದು ಅಲ್ಲದೇ ದಿನಾಂಕ:31/05/2007 ರಂದು ನಡೆದ ವಿಧಾನ ಸಭೆಯ ಅಂದಾಜು ಸಮಿತಿಯ ಸಭೆಯಲ್ಲಿಯೂ ಸಹ ಪದವಿ ಪೂರ್ವ ಶಿಕ್ಷಣ ಇಲಾಖೆಯಲ್ಲಿ ಇತರೆ ಇಲಾಖೆಗಳಲ್ಲಿ ನಿಯೋಜನೆ ಮೇಲೆ ಕಾರ್ಯ ನಿರ್ವಹಿಸುತ್ತಿರುವ ಎಲ್ಲಾ ಬೋಧಕ ಸಿಬ್ಬಂದಿಯನ್ನು ಕೂಡಲೇ ಹಿಂದಕ್ಕೆ ಪಡೆದು ಪದವಿ ಪೂರ್ವ ಶಿಕ್ಷಣ ಇಲಾಖೆಯಲ್ಲಿ ಸ್ಥಳ ನಿಯುಕ್ತಿಗೊಳಿಸಿ ಆದೇಶ ಹೊರಡಿಸುವಂತೆ ಸೂಚಿಸಿದ್ದು, ನಿಯೋಜನೆ ಮೇಲೆ ಕಾರ್ಯ ನಿರ್ವಹಿಸುತ್ತಿರುವ ಎಲ್ಲಾ ಪ್ರಾಂಶುಪಾಲರು / ಉಪನ್ನಯಸಕರನ್ನು ಕೂಡಲೇ ಆಯಾಯ ಇಲಾಖೆಗಳ ಸೇವೆಯಿಂದ ಹಿಂದಕ್ಕೆ ಪಡೆದು ಮಾತೃ ಇಲಾಖೆಗೆ ಹಿಂದಿರುಗಿಸಲು ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

2. ಅಲ್ಲದೇ ಮೇಲೆ (2) ರಲ್ಲಿ ಓದಲಾದ ದಿನಾಂಕ:16/08/2005 ರ ಸುತ್ತೋಲೆಯಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ಬರುವ ಸಾರ್ವಜನಿಕ ಶಿಕ್ಷಣ ಇಲಾಖೆ / ಪದವಿ ಪೂರ್ವ ಶಿಕ್ಷಣ ಇಲಾಖೆಯ ಬೋಧಕ ಸಿಬ್ಬಂದಿಗಳನ್ನು ಇತರೆ ಇಲಾಖೆಗಳಿಗೆ ನಿಯೋಜಿಸಿರುವುದರಿಂದ ಬೋಧಕ ಸಿಬ್ಬಂದಿಗಳ ಕೊರತೆ ಉಂಟಾಗಿದ್ದು, ಮಕ್ಕಳ ವಿದ್ಯಾಭ್ಯಾಸಕ್ಕೆ ಅಡಚಣೆ ಆಗುತ್ತಿರುವುದರಿಂದ ಸಾರ್ವಜನಿಕ ಶಿಕ್ಷಣ ಇಲಾಖೆಯ ಶಿಕ್ಷಕರು, ಮುಖ್ಯ ಶಿಕ್ಷಕರು ಹಾಗೂ ತತ್ಸಮಾನ ವೃಂದದ ಅಧಿಕಾರಿಗಳನ್ನು, ಪದವಿ ಪೂರ್ವ ಶಿಕ್ಷಣ ಇಲಾಖೆಯ ಪ್ರಾಂಶುಪಾಲರು / ಉಪನ್ಯಾಸಕರುಗಳನ್ನು ಬೇರೆ ಇಲಾಖೆಗಳಿಗೆ ನಿಯೋಜನೆ ಮಾಡುವುದುನ್ನು ನಿಷೇದಿಸಿದೆ. ಪ್ರಸ್ತವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಇಡಿ 368 ಡಿಪಿಐ 2005, ದಿನಾಂಕ:25/07/2007**

3. ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಪದವಿ ಪೂರ್ವ ಶಿಕ್ಷಣ ಇಲಾಖೆಯಲ್ಲಿ ನೇಮಕಗೊಂಡು ಆನಂತರ ನಿಯೋಜನೆ ಮೇಲೆ ಬೇರೆ ಇಲಾಖೆಗಳಲ್ಲಿ / ಕಛೇರಿಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಇದರೊಂದಿಗೆ ಅನುಬಂಧದಲ್ಲಿ ಲಗತ್ತಿಸಿರುವ ಒಟ್ಟು 17 ಪ್ರಾಂಶುಪಾಲರು / ಉಪನ್ಯಾಸಕರುಗಳ ಸೇವೆಯನ್ನು ಆಯಾ ಇಲಾಖೆಗಳಿಂದ ಈ ಕೂಡಲೇ ಜಾರಿಗೆ ಬರುವಂತೆ ಹಿಂದಕ್ಕೆ ಪಡೆಯಲಾಗಿದೆ. ಅವರುಗಳ ಸೇವೆಯನ್ನು ಮಾತೃ ಇಲಾಖೆಗೆ ಹಿಂದಿರುಗಿಸಲು ಆದೇಶಿಸಿದೆ.

4. ನಿಯೋಜನೆ ಮೇಲೆ ಕಾರ್ಯ ನಿರ್ವಹಿಸುತ್ತಿರುವ ಈ ಎಲ್ಲಾ ಪ್ರಾಂಶುಪಾಲರು / ಉಪನ್ಯಾಸಕರನ್ನು ಈ ಆದೇಶದ ದಿನಾಂಕದಿಂದ 15 ದಿನಗಳ ಒಳಗಾಗಿ ಮಾತೃ ಇಲಾಖೆಗೆ ಹಿಂದಿರುಗಿಸತಕ್ಕದ್ದು. ಇದನ್ನು ಪ್ರಾಂಶುಪಾಲರು / ಉಪನ್ಯಾಸಕರ ಸೇವೆಯನ್ನು ಎರವಲು ಪಡೆದ ಇಲಾಖೆಗಳು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು. ಮಾತೃ ಇಲಾಖೆಗೆ ಹಿಂದಿರುಗಿಸಲ್ಪಟ್ಟ ಪ್ರಾಂಶುಪಾಲರು / ಉಪನ್ಯಾಸಕರನ್ನು ತಕ್ಷಣ ಇಲಾಖೆಯಲ್ಲಿನ ಖಾಲಿ ಇರುವ ಹುದ್ದೆಗೆ ಸ್ಥಳ ನಿಯುಕ್ತಿಗೊಳಿಸಲು ಆಯುಕ್ತರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು, ಇವರಿಗೆ ಅಧಿಕಾರ ನೀಡಲಾಗಿದೆ.

5. ಆದೇಶ ಹೊರಡಿಸಿದ 15 ದಿನಗಳೊಳಗಾಗಿ ಇಲಾಖೆಗೆ ವಾಪಸ್ಸು ಬಂದು ಹಾಜರಾಗದಿದ್ದಲ್ಲಿ ಅಂತಹ ಉಪನ್ಯಾಸಕರನ್ನು ಸೇವೆಯಿಂದ ಅಮಾನತ್ತುಗೊಳಿಸಲು ಕ್ರಮಕೈಗೊಂಡು ಆ ಬಗ್ಗೆ ಸರ್ಕಾರಕ್ಕೆ ಮಾಹಿತಿ ನೀಡಲು ಆಯುಕ್ತರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು, ರವರಿಗೆ ಈ ಮೂಲಕ ತಿಳಿಸಲಾಗಿದೆ. ಈ ರೀತಿ ಮಾತೃ ಇಲಾಖೆಗೆ ವಾಪಸ್ಸು ಬರದೇ ನಿಯೋಜನೆಯಲ್ಲಿಯೇ ಮುಂದುವರೆಯುವ ಪ್ರಾಂಶುಪಾಲರ ಬಗ್ಗೆ ಸರ್ಕಾರಕ್ಕೆ ಆಯುಕ್ತರು, ಪದವಿ ಪೂರ್ವ ಶಿಕ್ಷಣ ಇಲಾಖೆ, ರವರು ಮಾಹಿತಿ ನೀಡತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಸ್ವರ್ಣಲತಾ.ಎಂ.ಭಂಡಾರೆ),
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ಸೇವೆಗಳು–1,2)

**ಇವರಿಗೆ:–**

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ, ವಿಕಾಸ ಸೌಧ, ಬೆಂಗಳೂರು.
3. ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
4. ಅಧ್ಯಕ್ಷರು, ಕರ್ನಾಟಕ ವಿದ್ಯುತ್‌ಚ್ಛಕ್ತಿ ನಿಯಂತ್ರಣ ಮಂಡಳಿ, ಕರ್ನಾಟಕ, ಬೆಂಗಳೂರು.
5. ನಿರ್ದೇಶಕರು, Regional Institute of English, ಜ್ಞಾನಭಾರತಿ ವಿಶ್ವವಿದ್ಯಾಲಯ ಆವರಣ, ಬೆಂಗಳೂರು.
6. ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರಿ, ವಿಧಾನ ಸೌಧ, ಬೆಂಗಳೂರು.
7. ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ವಿಧಾನ ಸೌಧ, ಬೆಂಗಳೂರು.
8. ನಿರ್ದೇಶಕರು, ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ಇಲಾಖೆ, ಬೆಂಗಳೂರು.
9. ಕಾರ್ಯದರ್ಶಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ವಿಕಾಸ ಸೌಧ, ಬೆಂಗಳೂರು.
10. ಕಾರ್ಯದರ್ಶಿ, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ, ವಿಕಾಸ ಸೌಧ, ಬೆಂಗಳೂರು.
11. ಆಯುಕ್ತರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಮಲ್ಲೇಶ್ವರಂ, ಬೆಂಗಳೂರು.
12. ಆಯುಕ್ತರು, ವೃತ್ತಿ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
13. ನಿರ್ದೇಶಕರು, ಲೋಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
14. ಸಂಬಂಧಪಟ್ಟ ಅಧಿಕಾರಿಗೆ. (ಆಯುಕ್ತರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು, ಮುಖಾಂತರ)
15. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು.
16. ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇವರ ಆಪ್ತ ಕಾರ್ಯದರ್ಶಿಗಳು.
17. ಮಾಹಿತಿ ಕೇಂದ್ರ, ಶಿಕ್ಷಣ ಇಲಾಖೆ.
18. ಶಾಖಾರಕ್ಷಾ ಕಡತ // ಹೆಚ್ಚುವರಿ ಪ್ರತಿಗಳು.

# ಅನುಬಂಧ

ಪದವಿ ಪೂರ್ವ ಶಿಕ್ಷಣ ಇಲಾಖೆಯಲ್ಲಿ ನೇಮಕಗೊಂಡು ಆನಂತರ ನಿಯೋಜನೆ ಮೇಲೆ ಬೇರೆ ಇಲಾಖೆಗಳಲ್ಲಿ / ಕಛೇರಿಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪ್ರಾಂಶುಪಾಲರು / ಉಪನ್ಯಾಸಕರ ವಿವರ

| ಕ್ರಮ ಸಂಖ್ಯೆ | ಪ್ರಾಂಶುಪಾಲರು / ಉಪನ್ಯಾಸಕರ ಹೆಸರು | ನಿಯೋಜನೆ ಮೇಲೆ ಕಾರ್ಯ ನಿರ್ವಹಿಸುತ್ತಿರುವ ಇಲಾಖೆ |
|---|---|---|
| 1. | ಶ್ರೀ.ಕೆ.ಆರ್.ಚವಾಣ್, ಪ್ರಾಂಶುಪಾಲರು. | ಸಮಾಜ ಕಲ್ಯಾಣ ಇಲಾಖೆ, ಉಡುಪಿ ಜಿಲ್ಲೆ |
| 2. | ಶ್ರೀ.ನಾರಾಯಣಸ್ವಾಮಿ, ಪ್ರಾಂಶುಪಾಲರು. | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ. |
| 3. | ಶ್ರೀ.ಕೆ.ವಿ.ರೆಡ್ಡಪ್ಪ, ಪ್ರಾಂಶುಪಾಲರು. | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ |
| 4. | ಡಾ:ದಯಾನಂದ, ಪ್ರಾಂಶುಪಾಲರು | ರೀಜನಲ್ ಇನ್ಸ್‌ಟ್ಯೂಟ್ ಆಫ್ ಇಂಗ್ಲೀಷ್ |
| 5. | ಶ್ರೀ.ಕೆ.ಬಿ.ಮುಕುಂದನ್, ಪ್ರಾಂಶುಪಾಲರು. | ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರ ಕಛೇರಿ. |
| 6. | ಶ್ರೀ.ಕೆ.ಆರ್.ಕಮಲೇಶ್, ಪ್ರಾಂಶುಪಾಲರು | ಮಾನ್ಯ ಉಪ ಮುಖ್ಯಮಂತ್ರಿಗಳ ಕಛೇರಿ. |
| 7. | ಶ್ರೀ.ವಿ.ಸಿದ್ದಯ್ಯ, ರಾಜ್ಯಶಾಸ್ತ್ರ ಉಪನ್ಯಾಸಕರು. | ಸಮಾಜ ಕಲ್ಯಾಣ ಇಲಾಖೆ. |
| 8. | ಶ್ರೀ.ಜಿ.ರವೀದ್ರ, ಇತಿಹಾಸ ಉಪನ್ಯಾಸಕರು. | ಸಮಾಜ ಕಲ್ಯಾಣ ಇಲಾಖೆ. |
| 9. | ಶ್ರೀ.ಎಸ್.ಹೆಚ್.ಲಕ್ಷ್ಮೀಗೌಡ, ಇತಿಹಾಸ ಉಪನ್ಯಾಸಕರು. | ಸಮಾಜ ಕಲ್ಯಾಣ ಇಲಾಖೆ. |
| 10. | ಶ್ರೀ.ಮನೋಜ್‌ಕುಮಾರ್ ಕೊಳ್ಳ, ಗಣಿತಶಾಸ್ತ್ರ ಉಪನ್ಯಾಸಕರು | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ |
| 11. | ಶ್ರೀ.ಅಖಿಲ್‌ಮಿರ್ಜಾ, ಸಮಾಜಶಾಸ್ತ್ರ ಉಪನ್ಯಾಸಕರು. | ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ. |
| 12. | ಡಾ :ರಾಜೇಂದ್ರ ಯರನಾಳೆ, ಕನ್ನಡ ಉಪನ್ಯಾಸಕರು. | ಕನ್ನಡ ಮತ್ತು ಸಂಸ್ಕೃತಿ ಇಲಾಖೆ. |
| 13. | ಶ್ರೀ.ರಾಜೇಂದ್ರಪ್ಪ, ಕನ್ನಡ ಉಪನ್ಯಾಸಕರು. | ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಕರ್ನಾಟಕ ಗೆಜಿಟಿಯರ್) |
| 14. | ಡಾ :ಟಿ.ಗೋವಿಂದರಾಜು, ಕನ್ನಡ ಉಪನ್ಯಾಸಕರು. | ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಕರ್ನಾಟಕ ಗೆಜಿಟಿಯರ್) |
| 15. | ಶ್ರೀ.ರಾಜೇಂದ್ರನ್, ಇಂಗ್ಲೀಷ್ ಉಪನ್ಯಾಸಕರು. | ರೀಜನಲ್ ಇನ್ಸ್‌ಟ್ಯೂಟ್ ಆಫ್ ಇಂಗ್ರೀಷ್ |
| 16. | ಶ್ರೀ.ಕೆ.ಸುರೇಶ್, ರಸಾಯನಶಾಸ್ತ್ರ ಉಪನ್ಯಾಸಕರು. | ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ. |
| 17. | ಶ್ರೀ.ತೇಜಸ್‌ಕುಮಾರ್, ರಸಾಯನಶಾಸ್ತ್ರ ಉಪನ್ಯಾಸಕರು. | ಮಾನ್ಯ ಸಣ್ಣ ಕೈಗಾರಿಕೆ ಮತ್ತು ರೇಷ್ಮೆ ಸಚಿವರ ಕಛೇರಿ. |

(ಸ್ವರ್ಣಲತಾ.ಎಂ.ಭಂಡಾರೆ),
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ಸೇವೆಗಳು–1,2)